# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮದಡಿ 2018-19ನೇ ಸಾಲಿನ ಎರಡನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ

1. ಸರ್ಕಾರದ ಆದೇಶ ಸಂಖ್ಯೆ: ಕೃಇ 70 ಕೃಯೋಕಾ 2018, ದಿನಾಂಕ: 10.04.2018.
2. ದಿನಾಂಕ: 19-06-2018 ರಂದು ನಡೆದ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ರಾಜ್ಯ ಮಟ್ಟದ ಸಮಿತಿ ಸಭೆಯ ನಡವಳಿ.
3. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ:.17-2/2018- RFS-III, ದಿನಾಂಕ:10-04-2018
4. ಸರ್ಕಾರದ ಆದೇಶ ಸಂಖ್ಯೆ: ಕೃಇ 78 ಕೃಕೈಲು 2018, ದಿನಾಂಕ: 24.07.2018
5. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ:.18-10/2018- RFS-III, ದಿನಾಂಕ: 28-12-2018.
6. ಆರ್ಥಿಕ ಇಲಾಖೆ ಜಮಾ ಧೃಡೀಕರಣ ಪತ್ರ ಸಂಖ್ಯೆ: FD 01 BGL 2018, ದಿನಾಂಕ: 02-01-2019.
7. ಕೃಷಿ ಆಯುಕ್ತರ ಪತ್ರ ಸಂ: ಉಕೃನಿ/ ಕೃಯಾಂ&ಸೂನೀ/ PMKSY/ಅ.ಬಿ/2018-19, ದಿ:14.01.2019.

**ಪ್ರಸ್ತಾವನೆ:**

2018-19ನೇ ಸಾಲಿನ ಆಯವ್ಯಯ ಸಂಪುಟ-3ರಲ್ಲಿ (ಪರಿಷ್ಕೃತ) ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮ ಲೆಕ್ಕ ಶೀರ್ಷಿಕೆ: 2401-00-108-1-15 ರಡಿ ಒಟ್ಟು ರೂ. 34582.00 ಲಕ್ಷ ಅನುದಾನವನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿರುತ್ತದೆ.

| ಕ್ರಸಂ | ಉಪ ಶೀರ್ಷಿಕೆ | ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1. | 059 | 50.00 |
| 2. | 106 | 23924.00 |
| 3. | 422 | 5731.00 |
| 4. | 423 | 2293.00 |
| 5. | 436 | 2619.00 |
| | ಒಟ್ಟು | **34582.00** |

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮವನ್ನು 2018-19ನೇ ಸಾಲಿನಲ್ಲಿಯೂ ಮುಂದುವರೆಸಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ.

ಮೇಲೆ ಓದಲಾದ (2)ರ ದಿನಾಂಕ: 19.06.2018ರಂದು ನಡೆದ ರಾಜ್ಯ ಮಟ್ಟದ ಸಮಿತಿ ಸಭೆಯಲ್ಲಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡುತ್ತಾ 2018-19ನೇ

ಸಾಲಿಗೆ ವಿವಿಧ ಇಲಾಖೆಗಳಿಗೆ ಕೆಳಕಂಡಂತೆ ರೂ. 984.85 ಕೋಟಿ ಅನುದಾನದ ಕ್ರಿಯಾ ಯೋಜನೆಯನ್ನು ಅನುಮೋದಿಸಲಾಗಿದೆ. ಅದರಂತೆ ಕೃಷಿ ಇಲಾಖೆಗೆ ರೂ.469.60 ಕೋಟಿ ಮೊತ್ತಕ್ಕೆ ಕ್ರಿಯಾ ಯೋಜನೆಗೆ ಅನುಮೋದನೆ ದೊರಕಿರುತ್ತದೆ.

| ಕ್ರಸಂ | ಇಲಾಖೆ | ಕೇಂದ್ರದ ಪಾಲು ಅನುದಾನ (ರೂ.ಕೋಟಿಗಳಲ್ಲಿ) |
|---|---|---|
| 1. | ತೋಟಗಾರಿಕೆ | 445.25 |
| 2. | ಕೃಷಿ | 469.60 |
| 3. | ರೇಷ್ಮೆ | 70.00 |
| | ಒಟ್ಟು ಮೊತ್ತ | **984.85** |

ಮೇಲೆ ಓದಲಾದ (3)ರ ಕೇಂದ್ರ ಸರ್ಕಾರದ ಪತ್ರ ದಿನಾಂಕ: 10-04-2018ರಲ್ಲಿ ಒಟ್ಟು ರೂ. 325.00 ಕೋಟಿ ಕೇಂದ್ರ ಸರ್ಕಾರದ ಅನುದಾನವನ್ನು ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮಕ್ಕೆ ಒದಗಿಸಲಾಗಿದೆ.

ಮೇಲೆ ಓದಲಾದ (4)ರ ಸರ್ಕಾರದ ಆದೇಶದಲ್ಲಿ ಲೆಕ್ಕಶೀರ್ಷಿಕೆ: 2401-00-108-1-15 ಅಡಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮ ಅನುಷ್ಠಾನಕ್ಕೆ ಒದಗಿಸಲಾಗಿರುವ ಅನುದಾನದಲ್ಲಿ 2017-18ನೇ ಸಾಲಿನಲ್ಲಿ ಉಳಿಕೆಯಾಗಿ ಮರುಮೌಲ್ಯೀಕರಿಸಿರುವ ರೂ. 7141.66 ಲಕ್ಷಗಳು ಹಾಗೂ ಮೊದಲನೇ ಕಂತಿನ ಅನುದಾನದ ಪೈಕಿ ರೂ. 14351.36 ಲಕ್ಷಗಳು ಸೇರಿದಂತೆ ಒಟ್ಟಾರೆ ರೂ.21493.02 ಲಕ್ಷಗಳನ್ನು ಬಿಡುಗಡೆ ಮಾಡಿ ಆದೇಶಿಸಲಾಗಿದೆ.

ಮೇಲೆ ಓದಲಾದ (5)ರ ಕೇಂದ್ರ ಸರ್ಕಾರದ ಪತ್ರ ದಿನಾಂಕ: 28-12-2018 ರಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಎರಡನೇ ಕಂತಿನ ಅನುದಾನವಾಗಿ ಒಟ್ಟು ರೂ. 127.6319 ಕೋಟಿ ಕೇಂದ್ರ ಸರ್ಕಾರದ ಅನುದಾನವನ್ನು ಬಿಡುಗಡೆಗೊಳಿಸಿದ್ದು ವಿವರ ಈ ಕೆಳಕಂಡಂತಿರುತ್ತದೆ.

| ಕ್ರಸಂ | ವರ್ಗ | ಕೇಂದ್ರದ ಪಾಲು ಅನುದಾನ (ರೂ.ಕೋಟಿಗಳಲ್ಲಿ) |
|---|---|---|
| 1. | ಸಾಮಾನ್ಯ | 95.724 |
| 2. | ಪ.ಜಾ | 22.9737 |
| 3. | ಪ.ಪಂ | 8.9342 |
| | ಒಟ್ಟು ಮೊತ್ತ | **127.6319** |

ಸದರಿ ಅನುದಾನವು ರಾಜ್ಯಕ್ಕೆ ಜಮೆಯಾಗಿರುವ ಕುರಿತು ಮೇಲೆ ಓದಲಾದ ಕ್ರಮಾಂಕ (6)ರಲ್ಲಿನ ಆರ್ಥಿಕ ಇಲಾಖೆ ಜಮಾ ಧೃಡೀಕರಣ ಪತ್ರದಲ್ಲಿ ದೃಡೀಕರಿಸಲಾಗಿರುತ್ತದೆ.

ಮೇಲೆ ಓದಲಾದ (7)ರ ಕೃಷಿ ಆಯುಕ್ತರ ಪತ್ರದಲ್ಲಿ ಪ್ರಸ್ತುತ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ಎರಡನೇ ಕಂತಿನ ಅನುದಾನ ರೂ.127.6319 ಕೋಟಿ ಅನುದಾನದಲ್ಲಿ ರೂ.60.8588 ಕೋಟಿ ಕೃಷಿ ಇಲಾಖೆಗೆ ಮೀಸಲಾಗಿದ್ದು ಸದರಿ ಅನುದಾನಕ್ಕೆ ಅನುಗುಣವಾಗಿ ರಾಜ್ಯದ ಪಾಲಿನ ಅನುದಾನ ರೂ. 117.5849 ಕೋಟಿ ಸೇರಿದಂತೆ ಒಟ್ಟಾರೆ **ರೂ. 178.4437 ಕೋಟಿ** ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಮುಂದುವರೆದು, ಈ ಕೆಳಕಂಡ ಕೋಷ್ಟಕದಲ್ಲಿರುವಂತೆ ಅನುದಾನ ಬಿಡುಗಡೆ ಮತ್ತು ಹೆಚ್ಚುವರಿ ಅನುದಾನದ ಮಾಹಿತಿಯನ್ನು ಸಹ ಕೃಷಿ ನಿರ್ದೇಶಕರು ನೀಡಿರುತ್ತಾರೆ.

(ರೂ. ಕೋಟಿಗಳಲ್ಲಿ)

| ಕ್ರ ಸಂ | ವಿವರ | ಉಪಶೀರ್ಷಿಕೆ | | | | ಒಟ್ಟು |
|---|---|---|---|---|---|---|
| | | 059 | 106 | 422 | 423 | |
| 1. | ಕೇಂದ್ರ ಸರ್ಕಾರದಿಂದ ಅನುಮೋದಿತ ಕ್ರಿಯಾಯೋಜನೆಯ ಅನ್ವಯ ಅವಶ್ಯವಿರುವ ಅನುದಾನ | 0.50 | 351.25 | 84.42 | 32.83 | 469.00 |
| 2 | 2017-18ನೇ ಸಾಲಿನಲ್ಲಿ ಉಳಿಕೆಯಾದ ಹಾಗೂ ಮರುಮೌಲ್ಯೀಕರಣಗೊಳಿಸಬೇಕಾದ ಅನುದಾನ | 1.50 | 10.22 | 43.23 | 17.47 | 72.42 |
| | **2018-19ನೇ ಸಾಲಿನಲ್ಲಿ ಒಟ್ಟು ಕಾರ್ಯಕ್ರಮ** | **2.00** | **361.47** | **127.65** | **50.30** | **541.42** |
| 3 | ಆಯವ್ಯಯದಲ್ಲಿ ಒದಗಿಸಿರುವ ಅನುದಾನ | 0.50 | 239.24 | 57.31 | 22.93 | 319.98 |
| 4 | ಮರುಮೌಲ್ಯೀಕರಣ ಗೊಳಿಸಿ ಬಿಡುಗಡೆ ಮಾಡಿರುವ ಅನುದಾನ | 0.50 | 10.2158 | 43.23 | 17.4678 | 71.4166 |
| 5 | ಮೊದಲನೆ ಕಂತಿನಲ್ಲಿ ಬಿಡುಗಡೆ ಮಾಡಿರುವ ಅನುದಾನ | 0.00 | 123.97 | 14.077 | 5.46 | 143.5136 |
| 6 | **ಈಗಾಗಲೇ ಬಿಡುಗಡೆ ಮಾಡಿರುವ ಒಟ್ಟು ಅನುದಾನ (4+5)** | **0.50** | **134.19** | **57.31** | **22.93** | **214.93** |
| 7 | ಬಿಡುಗಡೆ ನಂತರ ಆಯವ್ಯಯದಲ್ಲಿ ಉಳಿದಿರುವ ಅನುದಾನ (3-6) | 0.00 | 105.049 | 0.00 | 0.00 | 105.049 |
| 8 | ಮರುಮೌಲ್ಯೀಕರಣ ಮತ್ತು ಮೊದಲನೆ ಕಂತಿನಲ್ಲಿ ರಾಜ್ಯ ಸರ್ಕಾರದಿಂದ ಬಿಡುಗಡೆಗೆ ಬಾಕಿ ಇರುವ ಮೊತ್ತ | 1.00 | 0.00 | 7.19 | 14.60 | 22.79 |
| 9 | ಕೇಂದ್ರ ಸರ್ಕಾರದ ಬಿಡುಗಡೆ ಅನ್ವಯ ಎರಡನೆ ಕಂತಿನಲ್ಲಿ ಬಿಡುಗಡೆ ಮಾಡಬೇಕಿರುವ ಅನುದಾನ | 0.00 | 136.946 | 29.878 | 11.619 | 178.44 |
| 10 | **ಕೇಂದ್ರ ಸರ್ಕಾರದಿಂದ ಬಿಡುಗಡೆಯಂತೆ ರಾಜ್ಯದ ಪಾಲಿನ ಅನುದಾನವನ್ನ ಸೇರಿಸಿ ಒಟ್ಟು ಬಿಡುಗಡೆ ಮಾಡಬೇಕಿರುವ ಅನುದಾನ (6+7)** | **1.00** | **136.946** | **37.07** | **26.22** | **201.23** |
| 11 | **ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ-ಯೋಜನೆಗಳಡಿ ವೆಚ್ಚ ಮಾಡಲು ಕಷ್ಟ ಸಾಧ್ಯವಿರುವ ಅನುದಾನ** | **0.00** | **0.00** | **32.07** | **16.22** | **48.28** |
| 12 | **ಪ್ರಸ್ತುತ ಬಿಡುಗಡೆ ಮಾಡಲು ಕೋರಿರುವ ಅನುದಾನ** | **1.00** | **136.946** | **5.00** | **10.00** | **152.946** |
| 13 | **ಆಯವ್ಯಯದಲ್ಲಿ ಒದಗಿಸ ಬೇಕಿರುವ ಹೆಚ್ಚುವರಿ ಅನುದಾನ (12-7)** | **1.00** | **31.90** | **5.00** | **10.00** | **47.90** |

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಪ್ರಸ್ತುತ ಆಯವ್ಯಯ ಲೆಕ್ಕಶೀರ್ಷಿಕೆ: 2401-00-108-1-15:106 ಅಡಿ ಲಭ್ಯವಿರುವ ಅನುದಾನವನ್ನು ಬಿಡುಗಡೆ ಮಾಡಲು ಅನುವಾಗುವಂತೆ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

## <u>ಸರ್ಕಾರದ ಆದೇಶ ಸಂಖ್ಯೆ; ಕೃಇ 78 ಕೃಕೈಲು 2018, ಬೆಂಗಳೂರು, ದಿನಾಂಕ: 30.01.2019.</u>

2018-19ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ: 2401-00-108-1-15:106 ಅಡಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮ ಅನುಷ್ಠಾನಕ್ಕೆ ಒದಗಿಸಲಾಗಿರುವ ಅನುದಾನದಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ಎರಡನೇ ಕಂತಿನ ಅನುದಾನದ ಪೈಕಿ ಆಯವ್ಯಯದಲ್ಲಿ ಲಭ್ಯವಿರುವ ರೂ. 10504.98 ಲಕ್ಷಗಳನ್ನು (ಹತ್ತು ಸಾವಿರದ ಐದುನೂರ ನಾಲ್ಕು ಲಕ್ಷದ ತೊಂಬತ್ತೆಂಟು ಸಾವಿರ ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಲಾಗಿದೆ. ಕೃಷಿ ಇಲಾಖೆಯು ಕೇಂದ್ರ ಹಾಗೂ ರಾಜ್ಯದ ಪಾಲಿನ ಅನುದಾನದ ಅನುಪಾತವನ್ನು

ನಿಗದಿತ ಪ್ರಮಾಣದಲ್ಲಿ ಹಂಚಿಕೆ ಮಾಡಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸರ್ಕಾರವು ಈ ಮೂಲಕ ಮಂಜೂರಾತಿ ನೀಡಿದೆ.

ಕೃಷಿ ನಿರ್ದೇಶಕರು ಕೇಂದ್ರ ಸರ್ಕಾರವು ಆಗಿಂದ್ದಾಗ್ಗೆ ಹೊರಡಿಸುವ ಮಾರ್ಗಸೂಚಿ ಅನುಸಾರ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್.ಡಿ/02/ಟಿಎಫ್‌ಪಿ/2018 ದಿ:03-04-2018 ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾಗಿರುವ ಆರ್ಥಿಕ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

B S Nagarathnam

(ಬಿ.ಎಸ್. ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ)

30/1

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) / (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಕೃಷಿ ಆಯುಕ್ತರು,/ಕೃಷಿ ನಿರ್ದೇಶಕರು, ಶೇಷಾದ್ರಿ ರಸ್ತೆ, ಬೆಂಗಳೂರು.
7. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್, ಬೆಂಗಳೂರು.
8. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
9. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
10. ನಿರ್ದೇಶಕರು, TNMC, ಖನಿಜ ಭವನ ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ (FR & CC), ಆರ್ಥಿಕ ಇಲಾಖೆ, ಬೆಂಗಳೂರು.
12. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ- 4&5), ಆರ್ಥಿಕ ಇಲಾಖೆ, ಬೆಂಗಳೂರು
13. ಆಂತರಿಕ ಆರ್ಥಿಕ ಸಲಹೆಗಾರರು ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು
14. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.